**ಸಂಚಾರ ವಾಣಿಜ್ಯ ಶಾಖೆ:-**

ವಿಭಾಗೀಯ ಸಂಚಲನಾಧಿಕಾರಿ (DTO) ಸಂಚಾರ ಶಾಖೆ ವಾಣಿಜ್ಯ ಇಲಾಖೆಯ ಪ್ರಭಾರದಾರಕರಾಗಿದ್ದು (ಶಾಖಾ ಮುಖ್ಯಸ್ಥರು), ಮೂವರು ಸಂಚಾರ ಅಧೀಕ್ಷಕರು, ಒಬ್ಬರು ಸಂಚಾರ ನಿರೀಕ್ಷಕರು, ನಾಲ್ಕು ಕಿರಿಯ ಸಹಾಯಕರು ಇವರ ಅಧೀನದಲ್ಲಿದ್ದು, ಸಂಚಾರ ಶಾಖೆಯ ವಾಣಿಜ್ಯ ಮಳಿಗೆಗಳಿಗೆ ಸಂಬಂಧಿಸಿದಂತೆ, ಬಸ್ ನಿಲ್ದಾಣಗಳ ಸ್ವಚ್ಛತಾ ನಿರ್ವಹಣೆ, ಶೌಚಾಲಯ & ಆವರಣಗಳ ನಿರ್ವಹಣೆಗೆ ಸಂಬಂಧಿಸಿದ ಹಾಗೂ ಬಸ್ ನಿಲ್ದಾಣಗಳ ವಾಣಿಜ್ಯ ಸ್ಥಳದ ಏಕೈಕ ಅಭಿವೃದ್ಧಿದಾರರಿಗೆ ಸಂಬಂಧಿಸಿದಂತೆ, ಬಸ್ಸುಗಳ ಮೇಲಿನ ಜಾಹೀರಾತು, ಬಸ್ ನಿಲ್ದಾಣದಲ್ಲಿನ ಜಾಹೀರಾತು, ವಾಹನಗಳಲ್ಲಿನ ಪ್ರಯಾಣಿಕರಿಗೆ ವೈ-ಫೈ ಸೌಲಭ್ಯ ಕಲ್ಪಿಸುವ, ಬಸ್ ನಿಲ್ದಾಣಗಲ್ಲಿ ಪ್ರಯಾಣಿಕರಿಗೆ ಶುದ್ಧ ಕುಡಿಯುವ ನೀರಿನ ಯಂತ್ರ ಅಳವಡಿಸುವ ಮತ್ತು ವಿವಿಧ ಮಾದರಿಯ ಉಚಿತ ಬಸ್ ಪಾಸುಗಳು, ನಿಗಮದ ವಾಹನಗಳನ್ನು ಸಾಂದರ್ಭಿಕ ಒಪ್ಪಂದ ಮೇರೆಗೆ ಮತ್ತು ಗುತ್ತಿಗೆ ಒಪ್ಪಂದ ಮೇರೆಗೆ ನೀಡುವುದು. ನಿಗಮದ ಸಾರಿಗೆಗಳಲ್ಲಿ ಲಗೇಜ್ ಸಾಗಿಸುವ ಮತ್ತು ಮಾರ್ಗಬದಿಯ ಫಲಹಾರ ಮಂದಿರಗಳ ಬಳ ಪ್ರಯಾಣಿಕರ ಊಟೋಪಚಾರಕ್ಕೆ ನಿಲುಗಡೆ ನೀಡುವುದಕ್ಕೆ ಸಂಬಂಧಿಸಿದ ವಿಷಯದ ನಿರ್ವಹಣೆಯ ಬಗೆಗಿನ ಕಡತಗಳನ್ನು ಆದೇಶಗಳು / ನಿರ್ದೇಶನಗಳಾಗಿ, ಮುಖ್ಯ ಸಂಚಾರ ವ್ಯವಸ್ಥಾಪಕರಿಗೆ, ಮುಖ್ಯ ಸಂಚಾರ ವ್ಯವಸ್ಥಾಪಕರ ಮುಖಾಂತರ ನಿರ್ದೇಶಕರು (ಭ & ಜಾ) ಮತ್ತು ವ್ಯವಸ್ಥಾಪಕ ನಿರ್ದೇಶಕರು ರವರ ಅವಗಾಹನೆಗೆ ಮಂಡಿಸಲಾಗುವುದು.

ಕಾರ್ಯಗಳು:-

1. **ವಾಣಿಜ್ಯ ಮಳಿಗೆಗಳು:**
   ನಿಗಮದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿನ ವಾಣಿಜ್ಯ ಮಳಿಗೆಗಳಿಗೆ ಸಂಬಂಧಿಸಿದಂತೆ ಪರವಾನಗಿದಾರರ ಆಯ್ಕೆ ಮತ್ತು ನಿರ್ವಹಣೆಯ ಸಂಬಂಧ ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು ಮತ್ತು ಇತರೆ ನಿಗಮಗಳಿಂದ ಬರುವ ಪತ್ರಗಳ ಪರಿಶೀಲನೆ, ಮಾರ್ಗದರ್ಶನ ನೀಡುವುದು. ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಮತ್ತು ನಿರ್ವಹಣೆ ಸಂಬಂಧ ಸಾಮಾನ್ಯ ಸ್ಥಾಯಿ ಆದೇಶಗಳನ್ನು ಹೊರಡಿಸುವುದು.
2. **ಬಸ್ ನಿಲ್ದಾಣಗಳ ಶೌಚಾಲಯ / ಆವರಣಗಳ ಸ್ವಚ್ಛತೆ:**
   ಬಸ್ ನಿಲ್ದಾಣಗಳ ಆವರಣ ಮತ್ತು ಶೌಚಾಲಯಗಳ ನಿರ್ವಹಣೆ ಸಂಬಂಧ ಮಾರ್ಗದರ್ಶನ ನೀಡುವುದು. ಜೊತೆಗೆ ಸಾರ್ವಜನಿಕರಿಂದ ಬರುವ ದೂರುಗಳಿಗೆ ಹಾಗೂ ಕಾರ್ಯನೀತಿ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮ ವಹಿಸುವುದು.
3. **ಜಾಹೀರಾತು:**
   ನಿಗಮದ ಬಸ್ಸುಗಳ ಮೇಲೆ ಜಾಹೀರಾತು ಅಳವಡಿಸಲು ಪರವಾನಗಿದಾರರ ಆಯ್ಕೆಗೆ ಟೆಂಡರ್ ಪ್ರಕ್ರಿಯೆ ಮತ್ತು ಮಾಸಿಕ ಪರವಾನಗಿ ಶುಲ್ಕಗಳ ಪಾವತಿಯ ಕಡತಗಳ ನಿರ್ವಹಣೆಯನ್ನು ಕೇಂದ್ರ ಕಛೇರಿಯಲ್ಲಿಯೇ ನಿರ್ವಹಣೆ ಮಾಡಲಾಗುತ್ತಿದೆ. ಬಸ್ ನಿಲ್ದಾಣಗಳಲ್ಲಿ ಜಾಹೀರಾತು ಪ್ರದರ್ಶಿಸುವ ಸಂಬಂಧ ಪರವಾನಗಿದಾರರ ಆಯ್ಕೆಗೆ ಇತ್ಯಾಧಿ ಕಾರ್ಯನೀತಿ, ವಿವರಗಳ ಕುರಿತಂತೆ ಎಲ್ಲಾ ವಿಭಾಗಗಳಿಗೆ ಮಾರ್ಗದರ್ಶನ ನೀಡುವುದು.
4. **ರಸ್ತೆ ಬದಿಯ ಫಲಹಾರ ಮಂದಿರ:**
   ರಸ್ತೆ ಬದಿಯ ಫಲಹಾರ ಮಂದಿರಗಳ ಮಾಲಿಕರಿಂದ ಬರುವ ಮನವಿಗಳನ್ನು ಸ್ವೀಕರಿಸಿ ಫಲಹಾರ ಮಂದಿರಗಳಲ್ಲಿ ಅವಶ್ಯಕತೆ ಮತ್ತು ಅಗತ್ಯತೆಗಳ ಬಗ್ಗೆ ಯಾವುದಾದರೂ ಒಬ್ಬರು ಅಧಿಕಾರಿಯನ್ನು ಪರಿವೀಕ್ಷಣೆಗೆ ಕಳುಹಿಸಿ ವರದಿ ಪಡೆದು ನಂತರ ರಸ್ತೆ ಬದಿಯ ಫಲಹಾರ ಮಂದಿರಗಳ ಆಯ್ಕೆ ಮಾಡಿ ಪರಿಗಣಿತ ಫಲಹಾರ ಮಂದಿರಗಳ ಬಳಿ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಿ ಪರಿಷ್ಕೃತ ಪಟ್ಟಿ ಮಾಡುವುದು. ಈ ಬಗ್ಗೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಪರಿಶೀಲನೆ ಮಾಡುವುದು.

5. **ವಾಹನಗಳ ಪ್ರಾಸಂಗಿಕ / ಒಪ್ಪಂದದ ಕರಾರು ಮತ್ತು ಗುತ್ತಿಗೆ ಆದಾರದ ಮೇಲೆ ಒದಗಿಸುವ ಬಗ್ಗೆ:**

ಪ್ರಾಸಂಗಿಕ ಕರಾರಿನ ಒಪ್ಪಂದದ ಮತ್ತು ಗುತ್ತಿಗೆ ಆದಾರದ ದರಗಳನ್ನು ನಿಗದಿಪಡಿಸುವುದು. ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ವಾಹನ ಒಪ್ಪಂದ ಶಾಖೆಯನ್ನು Single Window ಮಾದರಿಯಲ್ಲಿ ತೆರೆಯಲಾಗಿದ್ದು, ಸಾರ್ವಜನಿಕರು ನಿಗಮದ ವ್ಯಾಪ್ತಿಯಲ್ಲಿ ಎಲ್ಲಿಂದಾದರೂ ವಾಹನಗಳನ್ನು ಸಾಂದರ್ಭಿಕ ಒಪ್ಪಂದದ ಮೇಲೆ ಪಡೆಯಲು ಅವಕಾಶವಿರುತ್ತದೆ.

6. **ಸರಕು ಮತ್ತು ಸಾಗಣೆ:**

ನಿಗಮದ ವಾಹನಗಳಲ್ಲಿ ಪ್ರಯಾಣಿಕರೊಂದಿಗಿನ ಲಗೇಜ್ ದರಗಳ ಪರಿಷ್ಕರಣೆ ಮತ್ತು ಪ್ರಯಾಣಿಕರ ರಹಿತ ಲಗೇಜ್ ಸಾಗಾಣಿಕೆಗೆ ಪರವಾನಗಿದಾರರ ಆಯ್ಕೆ ಮತ್ತು ನಿರ್ವಹಣೆ, ಎಲ್ಲಾ ವಿಭಾಗಗಳಿಂದ ಮತ್ತು ಇತರೆ ನಿಗಮಗಳಿಂದ ಬರುವ ಪತ್ರಗಳ ಪರಿಶೀಲನೆ, ಮಾರ್ಗದರ್ಶನ ನೀಡುವುದು.

7. **ವಿವಿಧ ಮಾದರಿ ಮಾಹೆಯಾನ ಪಾಸ್‌ಗಳ ಬಗ್ಗೆ:**

ಮಾಹೆಯಾನ ಪಾಸುಗಳ ದರಗಳನ್ನು ನಿಗದಿಪಡಿಸುವುದು. ದರಗಳ ಪರಿಷ್ಕರಣೆ ಹಾಗೂ ಈ ಸಂಬಂಧ ವಿಭಾಗಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.

8. **ವಿವಿಧ ಮಾದರಿಯ ರಿಯಾಯಿತಿ / ಉಚಿತ ಪಾಸುಗಳ ಬಗ್ಗೆ:**

ವಿದ್ಯಾರ್ಥಿ ರಿಯಾಯಿತಿ ಪಾಸು, ವಿಕಲಚೇತನರ ರಿಯಾಯಿತಿ ಪಾಸು, ಅಂಧರ ರಿಯಾಯಿತಿ ಪಾಸು, ಸ್ವಾತಂತ್ರ್ಯ ಹೋರಾಟಗಾರರ ರಿಯಾಯಿತಿ ಪಾಸು, ಇತ್ಯಾಧಿ ಪಾಸುಗಳಿನ ವಿವರದ ಬಗ್ಗೆ ವಿಭಾಗಗಳಿಂದ ಮತ್ತು ಇತರೆ ನಿಗಮಗಳಿಂದ ಬರುವ ಕಡತ ಮತ್ತು ಪತ್ರಗಳ ಪರಿಶೀಲನೆ ಮಾರ್ಗದರ್ಶನ ಮತ್ತು ಕಾರ್ಯನೀತಿ ವಿವರ, ಸಾರ್ವಜನಿಕರಿಂದ ಬರುವ ದೂರುಗಳ ಪರಿಶೀಲನೆ, ಪಾಸು ಕಳೆದು ಹೋದಲ್ಲಿ ಪಾಲಿಸಬೇಕಾದ ನಿಯಮ / ಕಾರ್ಯನೀತಿ.

9. **ಮಾಹೆಯಾನ ವರದಿ:**

1. ವಾಣಿಜ್ಯ ಆದಾಯ

   ಅ) ವಾಣಿಜ್ಯ ಮಳಿಗೆಗಳಿಂದ ಬರುವ ಆದಾಯ

   ಆ) ಖಾಲಿ ಇರುವ ವಾಣಿಜ್ಯ ಮಳಿಗೆಗಳ ವಿವರ

   ಇ) ಬಾಕಿ ಇರುವ ಪರವಾನಗಿ ಮೊತ್ತ

   2. ಜಾಹೀರಾತು ಸಂಬಂಧ ಆದಾಯ

   3. ಡಾಭಾದ ಆದಾಯ

   4. ಲಗೇಜ್ / ಸರಕಿನ ಆದಾಯ

   5. ಮಾಸಿಕ ಪಾಸು, ದಿನದ ಪಾಸು ಮತ್ತು ವಿದ್ಯಾರ್ಥಿ ರಿಯಾಯಿತಿ ಬಸ್‌ಪಾಸುಗಳ ವಿತರಣೆ ವಿವರ

****

**TRAFFIC (COMMERCIAL) DEPARTMENT**:

Divisional Traffic Officer is the Incharge of Traffic (Commercial) Section, 3 Assistance Traffic Superindent, one Traffic Inspecter, 4 Juniar Assistance are working under his control.

Related below these subjects of files put up for orders to maintance through Chief Traffic Manager (Commercial) to Director (S & V), and Managing Director.

**Subjects:**

1. License Selection of Commercial Stalls,
2. License / cleaning Agents Selection of cleaning maintenance of premises of bus stations, Toilets and Bathroom.
3. Maintenance of Single Agency bus stations
4. License Selection of Advertisement on Buses
5. License Selection for Advertisement of hoardings / glosigns on Bus stations
6. Wi-Fi facilities at KSRTC buses
7. Installation of pure drinking water machine at bus station for public passangers.
8. Free bus pass on various modes,
9. Provide Corporation vehicle on a casual contract and charted contract.
10. Carrying luggage in Corporation vehicle
11. Corporation vehicle stop at way side dhaba for passangers Tiffen / lunch / basic facilities.

****